**ದಿಃ 13.8.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿಗಳ ಪರ ವಕಿಲರಿಂದಃ**

ನಾನು ಹಾರ್ಡ್ ವೇರ್ ವ್ಯಾಪಾರ ಮಾಡುತ್ತಿದ್ದೆ. ಈಗ ಬೇರೆ ವ್ಯಾಪಾರ ಇರುತ್ತದೆ. ಈಗ ನಾನು ಬಾರ್ ವ್ಯಾಪಾರ ಮಾಡುತ್ತೇನೆ. 2018ರವರೆಗೆ ಹಾರ್ಡ್ ವೇರ್ ವ್ಯವಹಾರ ಮಾಡುತ್ತಿದ್ದೆ. ಹಿರಿಸಾವೆಯ ಗೌಡಯ್ಯ ಕಾಂಪ್ಲೆಕ್ ನಲ್ಲಿ ನನ್ನ ಅಂಗಡಿ ಇತ್ತು. ವಾರ್ಷಿಕವಾಗಿ ನನಗೆ 5 ರಿಂದ 6 ಲಕ್ಷ ಆದಾಯ ಇತ್ತು. ಈಗ ನಿಪಿ 9 ರಲ್ಲಿ ಇರುವ ವಿಳಾಸ ನನ್ನ ಹಾರ್ಡ್ ವೇರ್ ಅಂಗಡಿಯ ವಿಳಾಸ ಎಂದರೆ ಸರಿ. ನನ್ನ ಸ್ವಂತ ವಿಳಾಸ ಬೇರೆ ಇರುತ್ತದೆ. ಹಿರಿಸಾವೆ ಹೋ ಯಲ್ಲಿರುವ ಅರೆಕೆರೆ ನನ್ನ ಸ್ವಂತ ಊರು. 2017 ರಿಂದ ನಾನು ಚನ್ನರಾಯಪಟ್ಟಣದ ಗಾಯಿತ್ರಿ ಬಡಾವಣೆಯಲ್ಲಿ ವಾಸವಾಗಿದ್ದೇನೆ ಎಂದರೆ ನನ್ನ ಕುಟುಂಬದವರು ವಾಸ ಆಗಿರುತ್ತಾರೆ. ನನ್ನ ತಾಯಿ ಜೊತೆ ನಾನು ಊರಿನಲ್ಲಿ ಇರುತ್ತೇನೆ. ನನಗೆ ಬೇರೆ ವ್ಯವಹಾರ ಇದ್ದ ಕಾರಣ ಹಾರ್ಡ್ ವೇರೆ ವ್ಯಾಪಾರವನ್ನು ಮುಕಾಕ್ತಯಗೊಳಿಸಿರುತ್ತೇನೆ. ಹಾರ್ಡ್ ವೇರ್ ಅಂಗಡಿ ಮುಚ್ಚಿದ ನಂತರ ಅದರ ಹಿರಿಸಾವೆಯಲ್ಲಿ ಸೂಪರ ಮಾರ್ಕೇಟ್ ಅಂಗಡಿ ಮಾಡಿರುತ್ತೇನೆ ಎಂದರೆ ಸರಿ. ಸೂಪರ್ ಮಾರ್ಕೆಟ್ ನ್ನು ಮುಚ್ಚಿರುತ್ತೇನೆ ಎಂದರೆ ಸರಿ. ಅದು ನನ್ನ ವೈಯುಕ್ತಿಕ . ಹಾರ್ಡ್ ವೇರ್ ಮತ್ತು ಸೂಪರ್ ಮಾರ್ಕೇಟ್ ವ್ಯವಹಾರ ನಷ್ಟವಾದ ಕಾರ್ಣ ಮುಚ್ಚಿರುತೇನೆ ಎಂದರೆ ಸರಿಯಲ್ಲ. ಈಗ ನನ್ನ ಹೆಸರಿನಲ್ಲಿ ಎರಡು ಮಧ್ಯದ ಪರವಾನಗಿಗಳು ಇದ್ದು ಬಾರ್ ಮತ್ತು ರೆಸ್ಟೋರೆಂಟ್ ಆಗಿರುತ್ತದೆ. ನನ್ನ ಬಾರ್ ನ ಹೆಸರು ಎಸ್ ಎಂ ಬೋರ್ಡಿಂಗ್ ಮತ್ತು ಲಾಡ್ಜ್ ಎಂದು ಇದ್ದು ಅದು ಹಿರಿಸಾವೆ ಮತ್ತು ಮಟ್ಟನ ವಿಲೆ ಯಲ್ಲಿ ಇರುತ್ತವೆ. 2020 ರಲ್ಲಿ ಹಿರಿಸಾವೆಯಲ್ಲಿ ಮತ್ತು 2023 ರಲ್ಲಿ ಮಟ್ಟನ ವಿಲೆ ಯಲ್ಲಿ ಬಾರ್ ನ್ನು ಪ್ರಾರಂಬಿಸಿರುತ್ತೇನೆ ನನ್ನ ಹೆಸರಿನಲ್ಲಿ ಇರುವ ಪರವಾನಗಿಯನ್ನು ಹಾಜರುಪಡಿಸಲು ಯಾವುದೇ ತೂಂದರೆ ಇರುವುದಿಲ್. ಅರೆಕೆರೆ ಗ್ರಾಮದಲ್ಲಿ ನನಗೆ 4 ಎಕೆ ಜಮೀನು ಇದುದ ನನ್ನ ಹೆಂಡತಿ ಹೆಸರಿನಲ್ಲಿ 4 ಎಕರೆ ಜಮೀನು ಇರುತದೆ.

ನನಗೆ ಮಟ್ಟನ ವಿಲೆಯಲ್ಲಿ 1 ಎ 12 ಗುಟೆ ಜಮೀನು ಮತ್ತು ಚನ್ನರಾಯಪಟಟಣದ ರೈಲ್ವೆ ನಿಲ್ದಾಣದ ಹತಿರ 1 ಎಕರೆ 10 ಗುಂ ಜಮೀನು ಇರುತ್ತದೆ. ನಾನು ಎಲ್ಲಾ ಜಮೀನುಗಳ ಮೇಲೆ ಸಾಲ ಪಡೆದಿರುತ್ತೇನೆ ಎಂದರೆ ಮಟ್ನವಿಲೆ ಜಮೀನಿನ ಮೇಲ ಸಾಲ ಪಡೆದಿರುತೇನೆ. ನಾನು 1 ಕೋಟಿ 30 ಲಕ್ಷ ಸಾಲ ಪಡೆದಿರುತ್ತೇನೆ. ಇನ್ನಿತರೆ ಜಮೀನುಗಳ ಮೇಲೆ ಸಾಲ ಪಡೆದಿಲ್ಲ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಕಾರನ್ನು ತೆಗೆದಕೊಳ್ಳುವಾಗ ಸಾಲ ಮಾಡಿ ತೆಗೆದುಕೂಂಡಿರುತ್ತೇನೆ ಎಂದರೆ ಸರಿ. ಆ ಕಾರನ್ನು ಈಗ ಬೇರ ಕಾರು ಪಡೆಯುವ ಉದ್ದೇಶದಿಂದ ಮಾರಾಟ ಮಾಡಿರುತ್ತೇನೆ. ಶ್ರವಣ ಬೆಳಗೊಳದ ಶಾಂತಕುಮಾರ್ ನನಗೆ ಪರಿಚಯ ಇರುತ್ತಾರೆ. ಅವರೊಂದಿಗೆ ಜಮೀನಿನ ವ್ಯವಹಾರ ಮಾಡಿತೇನೆ ಎಂದರೆ ಸರಿ. ಪಿಯಾದುದಾರರು ಶಾಂತಕುಮಾರರ ಹೆಂಡತಿ ಎಂದರೆ ಸರಿ ಅವರು ಪರಿಚಯ ಇರುತ್ತಾರೆ. ಶಾಂತ ಕುಮಾರರ ವರಿಂದ ನಾನು

ಶ್ರವಣಬೆಳಗೊಳದ ಜಮೀನನ್ನು ಕರೀದಿಸಲು 1 ಕೋಟಿ 90 ಲಕ್ಷಕ್ಕೆ ವ್ಯಾಪಾರ ಆಗಿತ್ತು, ಒಪ್ಪಂದ ಪತ್ರ ಪ್ರಕಾರ 5 ಲಕ್ಷ ಹಣವನ್ನು ಮುಂಗಡ ಕೊಟಿಟದ್ದೆ. ನೊಂದಾಯಿತ ಪತ್ರದ ಪ್ರಕಾರ ಆಸಿತ ನೊಂದಾಯಿಸಲು 6 ತಿಂಗಳ ನಂತರ ಸಮಯ ಪಡೆದಿರುತ್ತೇನೆ. ದಿಃ 27.2.2015 ರಂದು ಒ್ಪಂದ ಪತ್ರವನ್ನು ಮಾಡಿಕೊಂಡಿರುತೆವೆ ಹಾಗೂ ಅದು ಮುಂದೆ ರದ್ದಾಗಿರುತ್ತದೆ. ಶಾಂತರಾಜು ರವರು ನೊಂದಣಿ ಮಾಡಿಕೊಡಲು ಬಾಕಿ ಉಳಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡು ನೊಂದಣಿ ಮಾಡಲು ಶಾಂತರಾಜು ರವರನ್ನು ಕರೆದಿದ್ದೀರಾ ಎಂದರೆ ನಮಗೂ ಅವರಿಗೂ ಹೊಂದಾಣಿಕೆ ಆಗದ ಕಾರಣ ಒಪ್ಪಂದ ಪತ್ರವನ್ನು ರದ್ದುಪಡಿಸಿರುತ್ತೇನೆ. 6 ತಿಂಗಳಿಂದ 12 ತಿಂಗಳ ವರೆಗೆ ಸಮಯ ಆದ ಕಾರಣ ಹೆಚ್ಚಿನ ಹಣವನ್ನು ಕೇಳಿದ್ದರಿಂದ ಒಪ್ಪಂದ ಪತ್ರ ರದ್ದಾಗಿರುತ್ತದೆ. ಒಪ್ಪಂದ ಪತ್ರದ ಪ್ರಕಾರ ಕ್ರಯಪತ್ರವನ್ನು ಬರೆದುಕೊಟ್ಟು ಹಣ ಪಡೆದುಕೊಳ್ಳಲು ಬ್ಯಾಂಕಿನಲ್ಲಿ ಹಣ ಇಟ್ಟುಕೊಂಡಿದ್ದೀರಾ ಎಂದರೆ ನೊಂದಣಿ ಹಿಂದಿನ ದಿನ ಮಾತ್ರ ಹಣ ಇಟ್ಟುಕೊಳ್ಳುತ್ತೇವೆ. ಆ ದಿನದ ಬ್ಯಾಂಕಿನ ದಾಖಲೆಗಳನ್ನು ಹಾಜರುಪಡಿಸಲು ತೊಂದರ ಇಲ್ಲ ಅದು ಅವಶ್ಯಕತೆ ಇಲ್ಲ. ದಿಃ 25.1.2016 ರಂದು ಒಪ್ಪಂದ ಪತರವನ್ನು ರದ್ದು ಮಾಡಿುತ್ತೇನೆ. ಒಟ್ಟು 3 ಕರಾರು ಪತ್ರ ಮಾಡಿಕೊಂಡಿರುತ್ತೇನೆ. 2 ನೇ ಕ್ರಯಪತ್ರವನ್ನು ದಿಃ 27.2.2015 ಮಾಡಿಕೊಂಡಿರುತ್ತೇನೆ. ಆ ಕ್ರಯ ಒಪ್ಪಂದ ಪತ್ರದಲ್ಲಿ 45 ಲಕ್ಷ ಹಣ ತೋರಿಸಿರುತ್ತೇವೆ.. ಮುಂಗಡವಾಗಿ 5 ಲಕ್ಷ ಮತ್ತು ಮ್ಯಾನ್ಯುವಲ್ ಒಪ್ಪಂದದ ಪ್ರಕಾರ 45 ಲಕ್ಷ ಹಣವನ್ನು ಪಾವತಿಸಿರುತ್ತೇನೆ. ಉಳಿದ ಹಣವನ್ನು 6 ತಿಂಗಳ ಒಳಗೆ ಪಾವತಿ ಮಾಡಿ ಕ್ರಯಪತ್ರ ನೊಂದಣಿ ಮಾಡಿಕೊಳ್ಳಲು ಒಪ್ಪಂದ ಆಗಿತ್ತು. ಎರಡನೇ ಒಪ್ಪಂದ ಪತರದ ಪ್ರಕಾರ ಬ್ಯಾಂಕಿನಲ್ಲಿ ಹಣ ಇಟ್ಟುಕೊಂಡು ನಾನು ಅವರನ್ನು ಕರೆದಿದ್ದಾರೆ ಎಂದರೆ ಆದರೆ ಹೊಂದಾಣಿಕೆ ಆಗಲಿಲ್ಲ. ಮೂರನೇ ಕರಾರು ಪತ್ರ ದಿಃ 25.7.2016 ರಂದು ಆಗಿರುತ್ತದೆ. ಆ ಕ್ರಯಪತ್ರದಲ್ಲಿ ಜಮೀನಿನ ಬೆಲೆ 1 ಕೋಟಿ 90 ಲಕ್ಷಕ್ಕೆ ವ್ಯಾಪಾರವಾಗಿದ್ದು ಆ ಒಪ್ಪಂದ ಪತ್ರದಲ್ಲಿ 1 ಕೋಟಿ 15 ಲಕ್ಷ ತೋರಿಸಲಾಗಿತ್ತು. ಮುಂಗಡವಾಗಿ 1 ಕೋಟಿ 15 ಲಕ್ಷ ಪಾವತಿ ಮಾಡಿರುತ್ತೇನೆ. ಆರು ತಿಂಗಳ ನಂತರ ಮೂರನೇ ಒಪ್ಪಂ ದ ಪತ್ರವನ್ನು ಮಾಡಿಕೊಂಡಿರುತೇವೆ. ನನಗೆ ಮತ್ತು ಪಿರ್ಯಾದುದಾರರ ನಡುವೆ ಭನ್ನಾಬಿಪ್ರಾಯ ಬಂದಾಗ ಬಗೆಹರಿಸಿಕೊಳ್ಳಲು ಪ್ರಯತ್ನಿಸಿರುತ್ತೇವೆ. ಆ ಪ್ರಯತ್ನದಿಂದಲೇ ನನಗೂ ಶಾಂತಕುಮಾರರ ನಡುವೆ ವ್ಯವಹಾರ ಮುಕ್ತಾಯ ಮಾಡಿಕೊಂಡಿರುತ್ತೇವೆ . ಮೂರು ಒಪ್ಪಂ ದ ಪತ್ರುಗಳ ವ್ಯವಹಾರ ಸಮಯದಲ್ಲಿ ನಾನು ಹಾರ್ಡ್ ವೇರ್ -ಇಟ್ಟಿಗೆ ವ್ಯವಹಾರ ಮಾಡಿಕೊಂಡಿರುತ್ತೇವೆ.. ಇಟ್ಟಿಗೆ ವಸ್ಯವಹಾರದಲ್ಲಿಯೂ ಸಹ ನಾನು ನಷ್ಟ ಅನುಭವಿಸಿರುತ್ತೇನೆ ಎಂದರೆ ಸರಿಯಲ್ಲ ನಾನು ಇಟ್ಟಿಗೆ ವ್ಯವಹಾರವನ್ನು ಮುಂದುವರಿಸಿಕೊಂಡಿರುತ್ತೇನೆ. ಮೂರು ಒಪ್ಪಂದ ಪತ್ರುಗಳ ಅವದಿ ಮೂಗಿದ ನಂತರ ಬ್ಯಾಂಕಿನಲ್ಲಿ ಹಣ ಇಟ್ಟುಕೊಂಡು ನೊಂದಣಿಗೆ ಶಾಂತಕುಮಾರ ರವರನ್ನು ಕರೆದಿದ್ದಾರ ಎಂದರೆ ಕರೆದು ಮಾತನಾಡಿರುತ್ತೇನೆ ನೊಂದಣಿ ಹಿಂದಿನ ದಿನ ಮಾತ್ರ ಬ್ಯಾಂಕಿ ನಲ್ಲಿ ಹಣ ಇಟ್ಟುಕೊಂಡಿರುತ್ತೇವೆ. 2015 ರಿಂದ 17 ರ ವರೆಗೆ

ಬ್ಯಾಂಕಿನ ದಾಖಲೇ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ಈಗ ನೋಡುತ್ತಿರುವ ನಿ ಪಿ 1 ರಿಂದ 3 ರ ಚೆಕ್ಕುಗಳು ನನಗೆ ಸೇರಿದ್ದು ಎಂದರೆ ಸರಿ ಆದರೆ ಅವುಗಳನ್ನು ಭದ್ರತೆಗೆ ನೀಡಿದ್ದೆ. ಚೆಕ್ ನಲ್ಲಿ ಇರುವ ಮೂರು ಸಹಿಗಳು ನನ್ನದೇ ಎಂದರೆ ಸರಿ ಆದರೆ ಬರವಣಿಗೆ ನನ್ನದಲ್ಲ. 25.7.2016 ರಂದು ಶಾಂತಕುಮಾರ ರವರಿಗೆ ಒಪ್ಪಂದ ಪತ್ರ ಆದಾಗ ಹಣ ಕೊಟ್ಟು ಒಪ್ಪಂದ ಪತ್ರ ಮಾಡಿಸಿಕೊಂಡಿರುತ್ತೇನೆ. ಬಾಕಿ ಇರುವ 75 ಲಕ್ಷಕ್ಕೆ ಮೂರು ಖಾಲಿ ಚೆಕ್ಕುಗಳನ್ನು ನನ್ನಿಂದ ಪಡೆದಿರುತ್ತಾರೆ. ನಂತರ ನಾನು ಹೋದಾಗ ಕ್ರಯಪತ್ರ ನೊಂದಣಿ ಮಾಡಿಕೊಡಲು ಅವರು ಸಮಯ ನೀಡಲಿಲ್ಲ. ನಂತರ ನಾನು ವಕೀಲರ ಮೂಲಕ ನೋಟೀಸನ್ನು ನೀಡಿಲ್ಲ ಆದರೆ ಮಾಡಿಕೊಡುವ ಭರವಸೆಯಿಂದ ನೀಡಿಲ್ಲ. ಸಾಕಷ್ಟು ಸಲ ಹಣ ಕೇಳಿದರೂ ಸಹ ನಾನು ಹಣ ಕೊಡದೇ ಆ ಆಸ್ತಿಯನ್ನು ಹೆಚ್ಚಿನ ಹಣಕ್ಕೆ ಪ್ರಭಾವತಿ ಎಂಬುವವರಿಗೆ ನೊಂದಣಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರ ದ ದಿನ ನಾನು ಅವರೊಂದಿಗೆ ಹೋಗಿದ್ದೆ. ನಿ ಪಿ 12 ರ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ ನನ್ನ ಮುಖಾಂತರವೇ ಅವರಿಗೆ ಹಣ ನೀಡಿರುತ್ತಾರೆ. ಕ್ರಯಪತ್ರದ ದಿನ ಮಂಜೇಗೌಡ ಮತ್ತು ಉಮಾಶಂಕರ್ ಇದ್ದರು. ಆ ಕ್ರಯಪತ್ರ ಮಾಡುವ ಸಂದರ್ಭದಲ್ಲಿ ನಾನು ಯಾವುದೇ ತಕರಾರು ಮಾಡಿಲ್ಲ ಕಾರಣ ನನಗೆ ಬರುವ ಹಣ ಬಂದರೆ ಸಾಕು ಎಂದು ತಕರಾರು ಮಾಡಿಲ್ಲ. ನಾನೇ ಖುದ್ದಾಗಿ ನಿಂತು ಪ್ರಭಾವತಿಯವರಿಗೆ ನೊಂದಣಿ ಮಾಡಿಸಿಕೊಟಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ಕನ್ನು ವಾಪಸ್ಸು ಕೇಳಿರುತ್ತೇನೆ. ಮೂಲ ಒಪ್ಪಂದ ಪತ್ರವನು ಕೊಟ್ಟು ಚೆಕ್ಕನ್ನು ವಾಪಸ್ ತೆಗೆದುಕೊಂಡು ಹೋಗಿ ಎಂದು ಹೇಳಿದ್ದರು . ನಂತರ ಾನು ಹೋದಾಗ ಅವರು ಊರಲ್ಲಿ ಇರಲಿಲ್ಲ ಶ್ರವಣ ಬೆಳಗೊಳದಲ್ಲಿರುವ ಅವರ ಮನೆಗೆ ಹೋಗಿದ್ದೆ. 4 ದಿನ ಬಿಟ್ಟು ನಾನು ಹೋಗಿದ್ದೆ. 75 ಲಕ್ಷದ ಭದ್ರತೆಗೆ ಮೂರು ಚೆಕ್ಕುಗಳನ್ನು ನಾನು ನೀಡಿದ್ದೆ. ನಾನು ದ್ವಿತಿಯ ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ . 2004 ರಿಂದ ನಾನು ಬ್ಯಾಂಕಿನ ವ್ಯವಹಾರ ಮಾಡುತ್ತದೇನೆ ಚೆಕ್ಕುಗಳ ಬಗ್ಗೆ ನನಗೆ ಜ್ಞಾನ ಇರುವುದಾಗಿದೆ ಎಂದರೆ ಸರಿ. ಚೆಕ್ಕುಗಳು ಅಮಾನ್ಯಗೊಂಡರೆ ತಪ್ಪಾಗುತ್ತದೆ ಎಂದು ನನಗೆ ಜ್ಞಾನ ಇರುತ್ತದೆ. 75 ಲಕ್ಷ ಹಣವನ್ನು ನಮೂದಿಸಿ ಚೆಕ್ಕುಗಳನ್ನು ನೀಡಲು ತೊಂದರೆ ಇತ್ತ ಎಂದರೆ ಒಪ್ಪಂದ ಪತ್ರ ಆದ ಎರಡು ದಿನಗಳ ನಂತರ ಖಾಲಿ ಚೆಕ್ಕನ್ನು ಕೇಳಿರುತ್ತಾರೆ. ನಾನು ಚೆಕ್ಕನ್ನು ನೀಡಲು ಪ್ರತಿರೋದ ವ್ಯಕ್ತಪಡಿಸಿಲ್ಲ, ಇದೇ ಚೆಕ್ಕಿನ ಪ್ರಕರಣ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ಎಡೂ ಕಡೆ ವಿಚಾರಣೆ ಮುಗಿದು ವಾದಕ್ಕಾಗಿ ನಿಗದಿಯಾಗಿತ್ತು ಎಂದರೆ ನನ್ನ ವಿಚಾರಣೆ ಆಗಿರಲಿಲ್ಲ. ಆ ನ್ಯಾಯಾಲಯದಲ್ಲಿ ನನ್ನ ಪರವಾಗಿ ಬೇರೆ ವಕೀಲರನ್ನು ನೇಮಿಸಿಕೊಂಡಿದ್ದೆ ಎಂದರೆ ಸರಿ. ನನ್ನ ಪರವಾಗಿ ಸಾಕ್ಷಿ ಇರುವ ಬಗ್ಗೆ ನನ್ನನ್ನು ಕೇಳಿಲ್ಲ ಆ ಪ್ರಕರಣದಲ್ಲಿ ನನ್ನ ಪರವಾಗಿ ಯಾವುದೇ ವಿಚಾರಣೆ ಇರುವುದಿಲ್ಲ ಎಂದು ಮೆಮೋ ಸಲ್ಲಿಸಿರುತ್ತೇನೆ ಎಂದರೆ ನನ್ನ ಗಮನಕ್ಕೆ ಬಂದಿಲ್ಲ. ಈ

ಪ್ರಕರಣದಲ್ಲಿ ಇರುವ ಮುಖ್ಯ ವಿಚಾರಣೆಯನ್ನು ಹೆಚ್ಚುವರಿ ನ್ಯಾಯಾಲಯದ ಮುಂದೆ ಹೇಳಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಆದಾಯ ತೆರಿಗೆಯನ್ನು 2012 ರಿಂದ ಪಾವತಿಸುತ್ತಿದ್ದೇನೆ. ಈಗ ನಾನು ಹಾಜರಪಡಿಸಿರುವ ದಾಖಲೆ 2012 ರಿಂದ 2018 ರವರೆಗ ಇರುತ್ತವೆ. ಪ್ರತಿ ವರ್ಷ ನಮ್ಮ ಲೆಕ್ಕ ಪರಿಶೋದಕರಿಗೆ ವ್ಯವಹಾರದ ಬಗ್ಗೆ ಮಾಹಿತಿ ನೀಡಿರುತ್ತೇನೆ ಎಂದರೆ ಸರಿ. 1 ಕೋಟಿ 15 ಲಕ್ಷ ಹಣ ನೀಡಲು ನನ್ನಲ್ಲಿ ಸ್ವಲ್ಪ ಹಣ ಇದ್ದು ಉಳಿದ ಹಣವನ್ನು ಸ್ನೇಹಿತರು ಮತ್ತು ಸಂಬಂಧಿಕರಿಂದ ಪಡೆದಿರುತ್ತೇನೆ. ನನ್ನ ಸ್ನೇಹಿತ ಚಿಕ್ಕವನಹಳ್ಳಿಯ ಮಂಜೇಗೌಡ ರಿಂದ 25 ಲಕ್ಷ, ನನ್ನ ಸಂಬಂಧಿಕರಾದ ನಂಜೇಗೌಡ ರಿಂದ 25 ಲಕ್ಷ, ಪಡೆದಿರುತ್ತೇನೆ. 50 ಲಕ್ಷ ಹಣ ನನ್ನಲ್ಲಿ ಇತ್ತು. ಸಿ ಎಸ್ ಮಂಜೇಗೌಡ ನನ್ನ ಹಾರ್ಡ್ ವೇರೆ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಮಂಜೇಗೌಡರನ್ನು ಸಾಕ್ಷಿಗ ಕರೆಸಬಹುದು ಆದರೆ ನಂಜೇಗೌಡರಿಗೆ ಕಿವಿ ಕೇಳುವುದಿಲ್ಲ. ನಾನು ಸಾಲ ಪಡೆದ ಹಣವನ್ನು ನನ್ನ ಲೆಕ್ಕ ಪರಿಶೋದಕರಿಗೆ ನಾನು ನೀಡಿಲ್ಲ ಕಾರಣ ಮ್ಯಾನ್ಯುಯಲ್ ಅಗ್ರಿಮೆಂಟ್ ಇದ್ದ ಕಾರಣ ಅದನ್ನು ನೀಡಿಲ್ಲ. ನಾನು ಹಾಜರುಪಡಿಸಿರುವ ಆದಾಯ ತೆರಿಗೆ ದಾಖಲೆಯಲ್ಲಿ ನಾನು ಸಾಲ ಪಡೆದ ಬಗ್ಗೆ, 1 ಕೋಟಿ 15 ಲಕ್ಷ ಒಪ್ಪಂದ ಪತ್ರದಲ್ಲಿ ನೀಡಿದ ಬಗ್ಗೆ ನಮೂದು ಇರುವುದಿಲ್ಲ. ಪ್ರಭಾವತಿಯವರಿಗೆ ಮಾರಾಟ ಮಾಡಿ ನನಗೆ ಬಂದ ಹಣದ ಬಗ್ಗೆ ನನ್ನ ದಾಖಲೆಗಳಲ್ಲಿ ನಮೂದು ಮಾಡಿಲ್ಲ ಕಾರಣ ಅದು ಮ್ಯಾನ್ಯುವಲ್ ಒಪ್ಪಂ ಪತ್ರ ಆಗಿರುತ್ತದೆ. ನಾನು 25 ವರ್ಷಗಳಿಂದ ವ್ಯಾಪಾರ ಮಾಡುತ್ತಿರುವ ಕಾರಣ ನನ್ನಲ್ಲಿ 50 ಲಕ್ಷ ಹಣ ಇತ್ತು. ಕೋಟ್ಯಾಂತರ ರೂ ಹಣ ವ್ಯವಹಾರ ಮಾಡಿ ನಾನು ತೆರಿಗೆ ವಂಚನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಶಾಂತಕುಮಾರ್ ರವರು ಶ್ರವಣ ಬೆಳಗೊಳದ ಪರಧಾನ ಅರ್ಚಕರು ಎಂದರೆ ಇರಬಹುದು. ಖಾಲಿ ಚೆಕ್ಕುಗಳನ್ನು ವಾಪಸ್ ನೀಡದ ಬಗ್ಗೆ ಯಾವುದೇ ದೂರನ್ನು ನೀಡಿಲ್ಲ ಕಾರಣ ಮೂಲ ಪತ್ರ ನನ್ನಲ್ಲಿ ಇತ್ತು. ನನ್ನ ಹೆಂಡತಿ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನನಗೆ ರಾಜಕೀಯವಾಗಿ, ಬ್ಯಾಂಕಿನ ವ್ಯವಹಾರಗಳು, ಕರಾರು ಪತ್ರಗಳು, ಕ್ರಯಪತ್ರಗಳ ಬಗ್ಗೆ, ಕ್ರಯ ಒಪ್ಪಂದ ಪತ್ರ ರದ್ದಾಗಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಗಿರುತ್ತದೆ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ., ಚನ್ನರಾಯಪಟ್ಟಣ